# ಶ್ರೀಮಾತೆಯವರೊಡನೆ ಮಾತುಕತೆ



**(ದಿನಾಂಕ ೩.೮.೧೯೧೧: ಭಕ್ತೆ ಸರಯೂ ಬಾಲಾ ದೇವಿ ಶ್ರೀಮಾತೆಯವರಿಂದ ದೀಕ್ಷೆ ಪಡೆದುಕೊಂಡಿದ್ದಾರೆ. ಅಂದು ಆನಂದದಿಂದ ಅನೇಕ ಸ್ತ್ರೀಭಕ್ತೆಯರು ಪ್ರಸಾದ ತೆಗೆದುಕೊಂಡಿದ್ದಾರೆ. ಸಂಜೆ ಸಮಯ.- ಮುಂದೆ ಓದಿ.)**

ಸಂಜೆಯಾಗಿದೆ. ರಾಧು, ಮಾಕು ಮತ್ತಿತರರಿಗೆ ದೇವರ ಮನೆಯಲ್ಲಿ ಜಪಕ್ಕಾಗಿ ಬಂದು ಕುಳಿತುಕೊಳ್ಳಿ ಎಂದು ಶ್ರೀಮಾತೆಯವರು ಕರೆಯುತ್ತಿದ್ದಾರೆ. ಅವರುಗಳು ಬರುವುದು ತಡವಾಗುತ್ತಿದೆ. ಅದನ್ನು ನೋಡಿ ಅಸಹನೆಯಿಂದ "ಸಂಜೆಯ ಸಮಯದಲ್ಲಿ ಜಪ ಮಾಡುವುದನ್ನು ಬಿಟ್ಟು, ಇವರೆಲ್ಲ ಎಲ್ಲಿ ಹೋಗಿದ್ದಾರೋ?" ಎನ್ನುತ್ತಿದ್ದಾರೆ. ಸ್ವಲ್ಪ ಸಮಯದ ನಂತರ ಎಲ್ಲರೂ ಬಂದು ಜಪಕ್ಕಾಗಿ ಕುಳಿತುಕೊಂಡರು.

ಪೂಜನೀಯ ಸ್ವಾಮಿ ಯೋಗಾನಂದರು, ಗೋಲಾಪ್ ಮಾ ಮತ್ತಿತರರು ಸಹ ಬಂದು ಭಕ್ತಿಯಿಂದ ಶ್ರೀಮಾತೆಗೆ ನಮಸ್ಕರಿಸಿದರು. ಶ್ರೀಮಾತೆಯವರು ಕೆಲವರ ತಲೆಯ ಮೇಲೆ ಕೈಯಿಟ್ಟರು. ಕೆಲವರ ಗಲ್ಲಮುಟ್ಟಿ ಚುಂಬಿಸಿದರು; ಕೆಲವರಿಗೆ ಕೈಮುಗಿಯುತ್ತ ಆಶೀರ್ವದಿಸಿದರು. ನಂತರ ದಿನಸಿತ್ಯದಂತೆ, ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ, ಆಸನವನ್ನು ತೆಗೆದುಕೊಂಡು, ಜಪಕ್ಕಾಗಿ ಕುಳಿತರು. ಸ್ವಲ್ಪ ಸಮಯದ ನಂತರ, ಜಪ ಮುಗಿಸಿ ಎದ್ದರು. ಸಂಧ್ಯಾರತಿಗಾಗಿ ಅಣಿಯಾಗುತ್ತಿದೆ. ನನ್ನನ್ನು ಕರೆದೊಯ್ಯಲು, ಮನೆಯಿಂದ ಯಾರೋ ಬಂದಿದ್ದಾರೆ. ನಮಸ್ಕರಿಸಿ, ಶ್ರೀಮಾತೆಯವರಿಂದ ಬೀಳ್ಕೊಳ್ಳುತ್ತ ಹೇಳಿದೆ: "ಅಮ್ಮಾ, ನಾನು ಕೊಟ್ಟ ಸೀರೆಯನ್ನು ನೀವು ಉಡಲೇ ಇಲ್ಲವಲ್ಲಾ?" ಶ್ರೀಮಾತೆಯವರು ಹೀಗೆ ಹೇಳಿದರು: "ಹೌದಲ್ಲವೇ. ನೀನೇಕೆ ನನಗೆ ಜ್ಞಾಪಿಸಲಿಲ್ಲ?" ಶ್ರೀಮಾತೆಯವರಿಗೆ ನಮಸ್ಕರಿಸಿ ಮನೆಗೆ ಹಿಂದಿರುಗಿ ಬಂದೆ.

ಶಾಲೆಯ ವಿವಿಧ ಕಾರ್ಯಗಳಿಂದಾಗಿ ನನಗೆ ಶ್ರೀಮಾತೆಯವರ ಬಳಿ ಹೋಗಲು ಸಾಧ್ಯವಾಗಲಿಲ್ಲ. ಈ ಬಾರಿ ಹೋದಾಗ ಶ್ರೀಮಾತೆಯವರು ಬಹಳ ಆನಂದಪಟ್ಟರು. ಭೂದೇವ(ಶ್ರೀಮಾತೆಯವರ ತಮ್ಮನ ಮಗ) ಮಹಾಭಾರತ ಓದುತ್ತಿದ್ದ. ಚಿಕ್ಕವನಾದ್ದರಿಂದ ಸರಾಗವಾಗಿ ಓದಲು ಕಷ್ಟಪಡುತ್ತಿದ್ದ. ಮನೆಗೆಲಸ ಇನ್ನೂ ಬಾಕಿ ಇತ್ತು. ಆದರೆ ಒಂದು ಅಧ್ಯಾಯ ಮುಗಿಸದೆ, ಏಳುವಂತಿಲ್ಲ. ಆದ್ದರಿಂದ ಶ್ರೀಮಾತೆಯವರು ಭೂದೇವನಿಗೆ ಹೇಳಿದರು: "ಇವಳಿಗೆ ಕೊಡು. ಬೇಗ ಓದಿ ಮುಗಿಸುತ್ತಾಳೆ." ನಾನು ಹಿಂದೆ ಎಂದೂ ಶ್ರೀಮಾತೆಯವರ ಎದುರು ಓದಿರಲಿಲ್ಲ. ತುಂಬ ಲಜ್ಜೆ ಪಡುತ್ತ, ಹೇಗೋ ಓದಿ ಮುಗಿಸಿದೆ. ಮಹಾಭಾರತ ಪುಸ್ತಕಕ್ಕೆ ನಮಸ್ಕಾರ ಮಾಡಿ, ಶ್ರೀಮಾತೆ ಎದ್ದರು. ನಾವೂ ಸಹ ಸಂಜೆಯ ಆರತಿಗಾಗಿ ಅಣಿಯಾದೆವು. ಶ್ರೀಮಾತೆಯವರು ತಮ್ಮ ನಿರ್ದಿಷ್ಟ ಜಾಗದಲ್ಲಿ ಜಪಕ್ಕೆ ಕುಳಿತರು. ಜಪದ ಕಡೆಯಲ್ಲಿ, "ಹರಿಬೋಲ್, ಹರಿಬೋಲ್" ಎಂದು ಹೇಳುತ್ತ ಎದ್ದುನಿಂತರು. ಶ್ರೀರಾಮಕೃಷ್ಣರಿಗೆ ನಮಸ್ಕಾರ ಮಾಡಿ, ಎಲ್ಲರಿಗೂ ಪ್ರಸಾದ ಕೊಟ್ಟರು. ಅದೂ ಇದೂ ಮಾತನಾಡುತ್ತ ಕೆಲಸದ ಮಾತು ಬಂತು. ಶ್ರೀಮಾತೆ ಹೇಳಿದರು, " ಯಾವಾಗಲೂ ಕೆಲಸ ಮಾಡುತ್ತಿರುವುದು ಒಳ್ಳೆಯದು. ಇದರಿಂದ ದೇಹ ಮತ್ತು ಮನಸ್ಸುಗಳು ಚೆನ್ನಾಗಿರುತ್ತವೆ. ಜಯರಾಂಬಾಟಿಯಲ್ಲಿದ್ದಾಗ, ನಾನು ಹಗಲೂ ಇರುಳೂ ಕೆಲಸ ಮಾಡುತ್ತಿದ್ದೆ. ಯಾರ ಮನೆಗೂ ಹೋಗುತ್ತಿರಲಿಲ್ಲ. ಎಲ್ಲಿಗಾದರೂ ಹೋದರೆ, "ಏನಮ್ಮಾ! ಶ್ಯಾಮಾದೇವಿಯ ಮಗಳು ಹುಚ್ಚನನ್ನು ಮದುವೆ ಮಾಡಿಕೊಂಡಿದ್ದಾಳೆ" ಎಂದೆಲ್ಲಾ ಕಟುವಾಕ್ಯಗಳನ್ನು ಕೇಳಬೇಕಾಗಿತ್ತು. ಆದ್ದರಿಂದ ನಾನು ಯಾರ ಮನೆಗೂ ಹೋಗುತ್ತಿರಲಿಲ್ಲ. ಒಮ್ಮೆ ಬಹಳ ಹುಷಾರು ತಪ್ಪಿತ್ತು. ಏನು ಮಾಡಿದರೂ ಆರೋಗ್ಯ ಸುಧಾರಿಸಲಿಲ್ಲ. ಕೊನೆಗೆ ಸಿಂಹವಾಹಿನಿಯ ಮುಂದೆ ಹರಕೆ ಹೊತ್ತೆ. ಆಗ ಸರಿಹೋಯಿತು. ಅವಳು ಬಹಳ ಜಾಗೃತ ದೇವತೆ. ಈಗಲೂ ಸಹ ಸಣ್ಣ ಡಬ್ಬಿಯಲ್ಲಿ, ಸಿಂಹವಾಹಿನಿಯ ಮಣ್ಣನ್ನು (ದೇವಿಯ ಪ್ರತೀಕ) ಇಟ್ಟುಕೊಂಡಿದ್ದೇನೆ. ಪ್ರತಿದಿನ ನಾನು ಮತ್ತು ರಾಧು ಸ್ವಲ್ಪ ಸ್ವಲ್ಪವೇ ಸೇವಿಸುತ್ತೇವೆ."

ಕೊಲ್ಕತ್ತದ ಬಾಗಬಜಾರಿನಲ್ಲಿರುವ ಶ್ರೀಮಾತೆಯವರ ಮನೆಯ ಮುಂದೆ ಹಲವಾರು ಕೂಲಿಗಳು ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುತ್ತಿದ್ದರು. ಬಂಗಾಳದ ಅಕ್ಕಪಕ್ಕದ ಪ್ರದೇಶಗಳಿಂದ ಬಂದ ಈ ಜನ ನಾನಾ ರೀತಿಯ ಕೂಲಿ ಕೆಲಸಗಳನ್ನು ಮಾಡಿ ಜೀವಿಸುತ್ತಿದ್ದರು. ಅವರಲ್ಲಿ ಒಬ್ಬನ ಉಪಪತ್ನಿ ಕಾಯಿಲೆ ಬಿದ್ದಾಗ, ಅವನು ಅವಳನ್ನು ಬಹಳ ಶ್ರದ್ಧೆ ಪ್ರೀತಿಗಳಿಂದ ಉಪಚಾರ ಮಾಡಿದ. ಶ್ರೀಮಾತೆ ಇದನ್ನು ಉಲ್ಲೇಖಿಸುತ್ತ, "ಆಹಾ! ಎಂತಹ ಅದ್ಭುತ ಸೇವೆ. ಇದೇ ಅಹೈತುಕೀ ಸೇವೆ ( ಯಾವ ಅಪೇಕ್ಷೆಯೂ ಇಲ್ಲದೆ ಮಾಡುವ ನಿಸ್ವಾರ್ಥ ಸೇವೆ). ನಾನಂತೂ ಇಂಥದ್ದನ್ನು ಹಿಂದೆ ನೋಡಿಲ್ಲ. ಓ ಎಂತಹ ಪ್ರೀತಿ!" ಎಂದು ಮನಸಾರೆ ಹೊಗಳಿದರು. ಅವನೋ ಕೂಲಿಯವನು. ಅದರಲ್ಲೂ ಅವನು ಮಾಡಿದ್ದು ತನ್ನ ಉಪಪತ್ನಿಯ ಸೇವೆ. ನಾವಾದರೆ ಇದನ್ನು ನೆನೆದರೇ ಅಸಹ್ಯ ಪಡುತ್ತೇವೆ. ಕೆಟ್ಟವರಲ್ಲಿಯೂ ಇರುವ ಒಳ್ಳೆಯತನವನ್ನು ಗುರುತಿಸಲು ನಾವೆಂದು ಕಲಿಯುತ್ತೇವೆಯೋ, ಏನೋ?

ಎದುರುಗಡೆ ಇದ್ದ ಗುಡಿಸಿಲಿನಿಂದ ಬಡತನವೇ ಮೂರ್ತಿವೆತ್ತಂತೆ ಇದ್ದ ಒಬ್ಬಾಕೆ ತನ್ನ ರೋಗಗ್ರಸ್ತ ಶಿಶುವನ್ನು ಹೊತ್ತು ತಂದು, ಶ್ರೀಮಾತೆಯವರ ಆಶೀರ್ವಾದವನ್ನು ಬೇಡಿದಳು. ಶ್ರೀಮಾತೆಯವರು ಬಹಳ ಪ್ರೀತಿ ಮತ್ತು ದಯೆಯಿಂದ ಅವಳಿಗೆ ಆಶೀರ್ವಾದ ಮಾಡಿದರು. "ಎಲ್ಲವೂ ಸರಿಹೋಗುತ್ತದೆ. ಚಿಂತೆ ಪಡಬೇಡ." ಎಂದರು. ಎರಡು ದಾಳಿಂಬೆ ಮತ್ತು ಒಂದಿಷ್ಟು ದ್ರಾಕ್ಷಿಹಣ್ಣುಗಳನ್ನು ಶ್ರೀರಾಮಕೃಷ್ಣರಿಗೆ ನಿವೇದಿಸಿ ತರುವಂತೆ ನನಗೆ ಹೇಳಿದರು. ನಾನು ತಂದು ಶ್ರೀಮಾತೆಯವರ ಕೈಯಲ್ಲಿಟ್ಟೆ. ಅದನ್ನು ಆ ಬಡ ಹೆಂಗಸಿಗೆ ಕೊಡುತ್ತ, " ನಿನ್ನ ಮಗನಿಗೆ ತಿನ್ನಿಸಮ್ಮಾ" ಎಂದರು. ಆಕೆ ಹೃದಯ ತುಂಬಿ, ಆನಂದದಿಂದ ಶ್ರೀಮಾತೆಯವರಿಗೆ ಮತ್ತೆ ಮತ್ತೆ ನಮಸ್ಕರಿಸುತ್ತ, ಹೊರಟುಹೋದಳು.

( ಮುಂದುವರಿಯುವುದು )